(ಶ್ರೀ ಎಸ್. ಎಂ. ಕೃಷ್ಣ)

ನಡೆಯುತ್ತಾ ಇದೆ ಎಂದು ತಿಳಿಸಿದ್ದೇನೆ. ಆ ಸರ್ವೆ ರಿಪೋರ್ಟ್ ಬಂದಮೇಲೆ ಉದ್ದಿಮೆದಾರರು ಮುಂದೆ ಬಂದಮೇಲೆ ನಾವು ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತೇವೆ. ಅವರಿಗೆ ಅಲ್ಲಿ ಎಲ್ಲಾ ಸವಲತ್ತುಗಳನ್ನು ಕೂಡ ಕಲ್ಪಿಸಿ ಕೊಡುತ್ತೇವೆ ಎಂಬುದು ಸರ್ಕಾರದ ನಿರ್ಧಾರ.

**Employment Opportunities to the sons of the Soil*

385. SRI M. VENKATALINGAIAH (Krishnaraja).—

Will the Minister for Excise and Labour be pleased to state :—

(*a*) whether any advice or suggestions have been given by the State Government to the Employment Exchanges to provide employment to the sons of the soil in a larger numbers in Central, State owned Industries and other Industries established in the State;

(*b*) if so, the number of appointments made through the Employment Exchanges during the last two years; the number of persons of the State the number of appointments provided to the persons of other States;

(*c*) whether Government is considering a proposal to set up non-official local committee including the Officer of Employment Exchange at the time of preparing the final selection list of the candidates seeking jobs ?

SRI S. M. YAHYA —(Minister for Excise and Labour)

(*a*) No.

(*b*) This question does not arise in view of the reply to Clause (a).

(*c*) No.

ಶ್ರೀ ಎಂ. ವೆಂಕಟಲಿಂಗಯ್ಯ :—ಸ್ವಾಮಿ, ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಮುಖಾಂತರ ನಮ್ಮ ರಾಜ್ಯದ ಕೈಗಾರಿಕೆಗಳಲ್ಲಿ ರಾಜ್ಯ ಪ್ರಜೆಗಳಿಗೆ ಎಷ್ಟು ಉದ್ಯೋಗ ಸಿಕ್ಕಿದೆ, ಅನ್ಯ ರಾಜ್ಯ ಪ್ರಜೆಗಳಿಗೆ ಎಷ್ಟು ಉದ್ಯೋಗ ಸಿಕ್ಕಿದೆ, ಅಂದರೆ ಇವರುಗಳಿಗೆ ಎಷ್ಟು ಪರ್ಸೆಂಟ್ ಸಿಕ್ಕಿದೆ ಅನ್ನುವುದನ್ನು ಹೇಳುತ್ತೀರಾ ?

‡ಶ್ರೀ ಎಸ್. ಎಂ. ಯಾಹ್ಯಾ :—ಮಾನ್ಯ ಸದಸ್ಯರು ಹೇಳಿದ ಪ್ರಶ್ನೆ ತಿಳಿಯುವುದಿಲ್ಲ. ಏತಕ್ಕೆಂದರೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಮುಖಾಂತರ ಕಳೆದ ಎರಡು ವರ್ಷಗಳಿಂದ 29,381 ಜನರಿಗೆ ಉದ್ಯೋಗ ದೊರಕಿದೆ. ಆದುದರಿಂದ ಸನ್ಸ್ ಆಫ್ ದಿ ಸಾಯಿಲ್ ಥಿಯರಿ ಇದರಲ್ಲಿ ಯಾವುದು ಎನ್ನುವುದು ನಮಗೆ ಅರ್ಥವಾಗುವುದಿಲ್ಲ. ಸನ್ಸ್ ಆಫ್ ದಿ ಸಾಯಿಲ್ ಎಂದರೆ ಬರೇ ಕ್ಶೇತರ ಮಕ್ಕಳೇ, ಬರೇ ಕನ್ನಡಿಗರೇ ಅಥವಾ ಕರ್ನಾಟಕದವರೇ ಅಥವಾ ಪ್ರತಿಯೊಂದು ತಾಲ್ಲೂಕಿನವರೇ ಅಥವಾ ಡಿಸ್ಟ್ರಿಕ್ಟ್‌ನವರೇ ಅದನ್ನು ಯಾರೂ ಡಿಫೈನ್ ಮಾಡಿಲ್ಲ. ನಾವು ಕನ್ನಡ ಜನರಿಗೆ ಕೆಲಸ ಕೊಡುವ ಎಲ್ಲಾ ವ್ಯವಸ್ಥೆಯನ್ನೂ ಮಾಡಿದ್ದೇವೆ.

ಶ್ರೀ ಎಂ. ವೆಂಕಟಲಿಂಗಯ್ಯ :—ಸ್ವಾಮಿ, ಉದ್ಯೋಗಾಪೇಕ್ಷಿಗಳ ಪಟ್ಟಿಯನ್ನು ಅಂತಿಮವಾಗಿ ತಯಾರು ಮಾಡುವಾಗ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಅನ್ ಅಫಿಷಿಯಲ್ ಲೋಕಲ್ ಕಮಿಟಿ ಅಂತ ಒಂದು ಮಾಡಿಬಿಟ್ಟು ಅದರಲ್ಲಿ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಆಫೀಸರು ಇರುವ ಹಾಗೆ ಒಂದು ಕಮಿಟಿ ಮಾಡುವುದಕ್ಕೆ ತೊಂದರೆ ಏನು ಇದೆ ?

ಶ್ರೀ ಎಸ್. ಎಂ. ಯಾಹ್ಯಾ :—ಈಗಾಗಲೇ ಡಿಸ್ಟ್ರಿಕ್ಟ್ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಅಂತ ಇದೆ ಅದು ಒಂದು ರಕಮೆಂಡೇಟರಿ ಬಾಡಿ. ಅದರಲ್ಲಿ ಸಬ್ ಕಮಿಟಿಯೂ ಇದೆ. ಅದರಲ್ಲಿ ಅಫಿಷಿಯಲ್ಸ್ ಮತ್ತು ನಾನ್ ಅಫಿಷಿಯಲ್ ಎಲ್ಲರೂ ಇದ್ದಾರೆ.

9-00 A. M.

ಶ್ರೀ ಕೆ. ಪ್ರಭಾಕರ್ :— ಇದಕ್ಕೆ ಸಂಬಂಧಪಟ್ಟ ಹಾಗೆ ನಿರ್ದಿಷ್ಟವಾಗಿ ಇಲ್ಲಿ ಎಂದು ಉತ್ತರದಲ್ಲಿ ತಿಳಿಸಲಾಗಿದೆ. ಇಲ್ಲಿ ಸರಕಾರದವರು ಹೇಳುತ್ತಿರುವುದು ಒಂದು ರೀತಿಯಾಗಿದೆ. ಇದು ಒಂದೊಕ್ಕೊಂದು ವಿರೋಧಾಭಾಸವಾಗಿದ್ದಂತೆ ಕಾಣುತ್ತದೆ. ಇದರ ಬಗ್ಗೆ ಸರಿಯಾಗಿ ತಿಳಿಸುತ್ತಾರೆಯೇ ?

ಶ್ರೀ ಎಸ್. ಎಂ. ಯಾಹ್ಯಾ :— ಇದರ ಬಗ್ಗೆ ಖಚಿತವಾಗಿ ನಾವಸೀನೂ ಹೇಳುವಂತಿಲ್ಲ. ಪ್ರಶ್ನೆ ಇಲ್ಲರುವುದು ಸನ್ಸ್ ಆಫ್ ದಿಸಾಯಿಲ್ ಎಂದರೆ ಯಾವುದೂ ಡೆಫ್‌ನೆಟ್ ಆಗಿ ಕೇಳಿಲ್ಲ. ನಮ್ಮಲ್ಲಿರುವ ಎಂಪ್ಲಾಯಿಮೆಂಟು ಎಕ್ಸ್‌ಚೇಂಜುಗಳಲ್ಲಿ ಎಲ್ಲ ತರಹ ಜನರೂ ಬರುತ್ತಾರೆ. ಎಂಪ್ಲಾಯಿಮೆಂಟು ಎಕ್ಸ್‌ಚೇಂಜುಗಳು ಆಫ್ ಇಂಡಿಯಾ ನ್ಯಾಷನಲ್ ಎಂಪ್ಲಾಯ್‌ಮೆಂಟು ಸರ್ವಿಸ್ ಮ್ಯಾನ್ಯುಯಲ್ ಎಂದು ಇದೆ. ಇದರ ನಿಯಮಗಳಿಗನುಸಾರವಾಗಿ ಇಲ್ಲೂ ನೋಡಿಕೊಂಡು ಹೋಗಬೇಕಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ :— ಸನ್ಸ್ ಆಫ್ ದಿ ಸಾಯಿಲ್ ಎಂದರೆ ಡೆಫನೆಟ್ ಆಗಿ ನನಗೆ ಗೊತ್ತಿಲ್ಲ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳುವುದು ತುಂಬಾ ವಿಷಾದದ ಸಂಗತಿ ಏಕೆಂದರೆ, ರಾಷ್ಟ್ರದಲ್ಲಿ ಎಲ್ಲ ಕಡೆಯಲ್ಲೂ ಸನ್ಸ್ ಆಫ್ ದಿ ಸಾಯಿಲ್ ಎಂದರೆ ಎಲ್ಲರಿಗೂ ಗೊತ್ತಿರುವ ವಿಷಯ. ತಮಿಳುನಾಡಿನಲ್ಲಿ ಸನ್ಸ್ ಆಫ್ ದಿ ಸಾಯಿಲ್ ಎಂದರೆ ತಮಿಳು ನಾಡ ಮಕ್ಕಳೇ ಎನ್ನುತ್ತಾರೆ. ಅದೇ ರೀತಿ ನಮ್ಮ ಕರ್ನಾಟಕದಲ್ಲಿ ಸನ್ಸ್ ಆಫ್ ದಿ ಸಾಯಿಲ್ ಎಂದರೆ ಕರ್ನಾಟಕದ ಮಕ್ಕಳು ಎಂದ ಅರ್ಥವಾಗುತ್ತದೆ, ಮಣ್ಣಿನ ಮಕ್ಕಳು ಎಂದರೆ ನಮ್ಮ ರಾಜ್ಯದ ಮಕ್ಕಳು. ಇದಕ್ಕಾಗಿ ನೀವು ಯಾವ ರೀತಿಯಾದ ಅಳತೆಗೋಲು ಇಟ್ಟಿದ್ದೀರಿ ? ನಾನು ಹೇಳುವುದು ಹೆಸರುಗಳನ್ನು ರಿಜಿಸ್ಟರು ಮಾಡುವಾಗ ಮೊದಲಿಗೆ ಪ್ರೈಮರಿ ಸ್ಕೂಲು ಹಾಗೂ ಮಿಡಲ್ ಸ್ಕೂಲು ಸರ್ಟಿಫಿಕೇಟನ್ನು ಕಡ್ಡಾಯವಾಗಿ ಕೊಡಬೇಕು ಮತ್ತು ಅದರಲ್ಲಿ ಕರ್ನಾಟಕದವರೇ ಇದ್ದರೆ ಅವರಿಗೆ ಮೊದಲು ಅದ್ಯತೆ ಕೊಡ ಬೇಕೆಂದು ಮಾಡುವುದು ಸರಿಯಾಗಿರುವುದಿಲ್ಲವೇ ? ಇದರ ಬಗ್ಗೆ ವ್ಯವಸ್ಥೆ ಮಾಡುತ್ತಾರೆಯೇ ?

ಶ್ರೀ ಎಸ್. ಎಂ ಯಾಹ್ಯಾ : ಸ್ಕೂಲು ಸರ್ಟಿಫಿಕೇಟು ಹಾಗೂ ರೆಸಿಡೆನ್ಷಿಯಲ್ ಕ್ವಾಲಿಫಿಕೇಷನ್ ಇವುಗಳನ್ನು ನೋಡಿಕೊಂಡೇ ಹೆಸರುಗಳನ್ನು ಎಕ್ಸ್‌ಚೇಂಜುಗಳಲ್ಲಿ ರಿಜಿಸ್ಟರು ಮಾಡುತ್ತಾರೆ. ಇಂಡಿಯಾ ದೇಶದಲ್ಲಿರುವ ಇತರ ಕಡೆ ಗಳಿಂದ ಬಂದವರೂ ಇಲ್ಲಿ ರಿಜಿಸ್ಟರು ಮಾಡಿಸುತ್ತಾರೆ. ಎಂದರೆ ಇದರಲ್ಲಿ ಹೆಚ್ಚು ಜನ ಹೊರಗಿನವರು ಬಂದಿದ್ದಾರೆಂದು ಹೇಳಲಾಗುವುದಿಲ್ಲ. ಕರ್ನಾಟಕದವರೇ ಇವರು ಇತರ ಕಡೆಯವರು ಎಂದು ಹೇಳಲು ಕಷ್ಟ. ಸಾಮಾನ್ಯವಾಗಿ ನಮ್ಮಲ್ಲಿ ಕರ್ನಾಟಕದವರಿಗೇ ಹೆಚ್ಚು ಪ್ರಾಶಸ್ತ್ಯ ಕೊಡಬೇಕೆಂದು ಇದೆ. ಇದಕ್ಕೆ ತಕ್ಕ ವ್ಯವಸ್ಥೆ ಮಾಡುತ್ತಿದ್ದೇವೆ.

ಶ್ರೀ ಎಂ. ಮಲ್ಲಪ್ಪ :— ನಮ್ಮ ರಾಜ್ಯದ ಪ್ರಜೆಗಳಿಗೆ ಉದ್ಯೋಗಾವಕಾಶ ಗಳು ಇದ್ದರೂ ಅನೇಕ ಕಡೆಗೆಳಲ್ಲಿ ಉದ್ಯೋಗಗಳು ಅವರಿಗೆ ಸಿಗುತ್ತಿಲ್ಲ, ಎನ್ನು

ವುದು ಖಚಿತವಾಗಿ ನಮಗೆ ಗೊತ್ತಾಗುತ್ತದೆ. ನಮ್ಮ ಶಿಕ್ಷಣ ಇಲಾಖೆಯಲ್ಲಿರುವ ಸೇವಾ ನಿಯಮಗಳ ಪ್ರಕಾರ ನಮ್ಮ ರಾಜ್ಯದವರಿಗೇ ಉದ್ಯೋಗಗಳನ್ನು ಕೊಡ ಬೇಕೆಂದು ಇದ್ದರೂ ಕೂಡ ಇಲ್ಲಿ ಕೇರಳೀಯರು ಹಾಗೂ ತಮಿಳುನಾಡಿನವರೇ ಹೆಚ್ಚಾಗಿರುವುದು ಕಂಡುಬರುತ್ತದೆ ಮತ್ತು ಇವರಿಗೇ ಹೆಚ್ಚು ಅವಕಾಶಗಳು ಸಿಗುತ್ತಿವೆ. ಇದರಿಂದ ನಮ್ಮ ರಾಜ್ಯದಲ್ಲಿರುವ ಕನ್ನಡಿಗರು ನಿರುದ್ಯೋಗಿಗಳಾಗಲು ಅವಕಾಶವಾಗಿದೆ ಕನ್ನಡಿಗರಿಗೆ ತೊಂದರೆಗಳಾಗಿವೆ. ಹೊರಗಡೆಯವರಿಗೇ ಇಲ್ಲಿ ಆದ್ಯತೆ ಸಿಗುತ್ತಿರುವಾಗ ಇದಕ್ಕೆ ತಕ್ಕಂತೆ ನಮ್ಮ ಸರಕಾರ ಸೇವಾ ನಿಯಮ ಗಳನ್ನು ಬದಲಾವಣೆ ಮಾಡಿ ಇಂತಿಷ್ಟು ಕಡೆಗಳಲ್ಲಿ ಕನ್ನಡಿಗರಿಗೇ ಆದ್ಯತೆ ಕೊಡ ಬೇಕೆಂದು ಮಾಡಿ ಇದನ್ನು ಕಾರ್ಯಗತ ಮಾಡಲು ಪ್ರಯತ್ನ ಪಡುತ್ತಾರೆಯೇ ?

ಶ್ರೀ ಎಸ್. ಎಂ. ಯಹ್ಯಾ :— ಈ ವಿಷಯದಲ್ಲಿ ಸ್ವಲ್ಪ ತಪ್ಪು ಅಭಿಪ್ರಾಯ ಬರಲು ಕಾರಣವಾಗಿದೆ ಎಲ್ಲ ಕಡೆಯಲ್ಲೂ ಕನ್ನಡಿಗರಿಲ್ಲ ಬರೀ ಹೊರಗಡೆಯಿಂದ ಬರುವ ಜನರೇ ಇದ್ದಾರೆ ಎಂದು ಹೇಳುವುದು ಕಷ್ಟ. ಕರ್ನಾಟಕದಲ್ಲಿರುವ ಕನ್ನಡಿಗರ ಜೊತೆಯಲ್ಲಿ ಬಹಳ ಕಾಲದಿಂದಲೂ ಇಲ್ಲೇ ಬಂದು ವಾಸಮಾಡಿಕೊಂಡಿರುವ ಜನರು ಕೆಲವರು ತಮಿಳು ಮಾತಾಡುತ್ತಾರೆ, ಕೆಲವರು ತೆಲುಗು ಮಾತಾಡುತ್ತಾನೆ ಮತ್ತು ಕೆಲವರು ಕೇರಳದ ಭಾಷೆ ಮಾತಾಡು ತ್ತಾರೆ. ಆದರೆ ಇವರೆಲ್ಲರೂ ಹೊರಗಿನಿಂದ ಬಂದವರು ಎಂದು ಹೇಳಲಾಗುವು ದಿಲ್ಲ. ಬೆಂಗಳೂರಿನಲ್ಲೇ ಇಂತಹ ಎಷ್ಟೊ ಜನರು ಬಂದು ವಾಸವಾಗಿದ್ದಾರೆ. ಆದರೆ ಕೆಲವು ಕಡೆ ಇರುವ ಇನ್‌ಸ್ಟಿಟ್ಯೂಷನ್ಸ್‌ಗಳಲ್ಲಿ ಇಂತವರ ಸಂಖ್ಯೆ ಸ್ವಲ್ಪ ಹೆಚ್ಚಾಗಿ ಬಂದಿರಬಹುದು. ಎಲ್ಲರೂ ಹೊರಗಿನಿಂದಲೇ ಬಂದವರು ಎಂದು ಹೇಳು ವುದಕ್ಕಾಗುವುದಿಲ್ಲ. ಆದರೆ ನಮ್ಮ ರಾಜ್ಯದ ಪಾಲಿಸಿ ಆದಷ್ಟು ಹೆಚ್ಚಾಗಿ ಕರ್ನಾಟಕದವರಿಗೆ ಉದ್ಯೋಗಾವಕಾಶ ಕೊಡಬೇಕೆಂಬುದೆ ಇದೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು :— ತಮಗೆ ತಿಳಿದಿರುವಂತೆ ಬೆಂಗಳೂರಿನಲ್ಲಿರುವ ರಾಜ್ಯದ ಹಾಗೂ ಕೇಂದ್ರ ಸರಕಾರದ ಕಾರ್ಖಾನೆಗಳಲ್ಲಿ ಎಷ್ಟು ಜನ ರಾಜ್ಯದವರು ಇದ್ದಾರೆ ಬೇರೆ ರಾಜ್ಯಗಳವರು ಎಷ್ಟು ಇದ್ದಾರೆ ಎನ್ನುವ ವಿವರಗಳನ್ನು ಇಲ್ಲಿ ಕೊಡುತ್ತೀರಾ ? ಇದರಲ್ಲಿ ನಿಮ್ಮ ಪ್ರತಿನಿಧಿಗಳು ಯಾರಾದರೂ ಇರುತ್ತಾರೆಯೇ ?

ಶ್ರೀ ಎಸ್. ಎಂ. ಯಾಹ್ಯಾ :— ಪಬ್ಲಿಕ್ ಸೆಕ್ಟರು ಇಂಡಸ್ಟ್ರೀಗಳಲ್ಲಿ ರೆಕ್ರ್ಯೂಟ್‌ಮೆಂಟು ಮಾಡುವಾಗ ನಮ್ಮ ಎಂಪ್ಲಾಯಿಮೆಂಟು ಎಕ್ಸ್‌ಚೇಂಜಿ ನಲ್ಲಿರುವ ಒಬ್ಬರು ಜಾಯಿಂಟು ಡೈರೆಕ್ಟರು ಇಲ್ಲವೇ ಇವರ ಕಡೆಯ ರೆಪ್ರಸೆಂಟೆ ಟೀವ್ ಅಧಿಕಾರಿಗಳು ಇರುತ್ತಾರೆ. ಇದಲ್ಲದೆ ಕೇಂದ್ರ ಸರಕಾರದ ಒಂದು

(ಶ್ರೀ ಎಸ್. ಎಂ. ಯಾಹ್ಯಾ)

ನೂಚನೆ ಪ್ರಕಾರ ಎಲ್ಲ ರಾಜ್ಯಗಳಲ್ಲಿರುವ ಕಾರ್ಖಾನೆಗಳಲ್ಲಿ 500 ರೂಪಾಯಿ ಗಿಂತ ಕಡಿಮೆ ಸಂಬಳ ಬರುವ ಎಲ್ಲ ನೌಕರಿಗಳಿಗೂ ಆಯಾ ರಾಜ್ಯದವರನ್ನೇ ನೇಮಕ ಮಾಡಬೇಕೆಂದು ಹೇಳಿದ್ದಾರೆ. ಇದೇ ನಿಯಮವನ್ನು ಅನುಸರಿಸುತ್ತ ಒಂದಿದ್ದೇವೆ. ಐನೂರು ರೂಪಾಯಿಗಳಿಗೆ ಮೇಲ್ಪಟ್ಟ ಇರುವ ಕೆಲವು ನೌಕರಿಗಳಿಗೆ ರಾಜ್ಯದವರು ಹಾಗೂ ಹೊರಗಿನವರೂ ಬರಬಹುದು. ಇವನ್ನೆಲ್ಲಾ ಪರಿಶೀಲಿಸಲು ನಮ್ಮ ರಾಜ್ಯದವರೂ ಈ ಕಮಿಟಿಯಲ್ಲಿರುತ್ತಾರೆ.

ಶ್ರೀ ಎಂ. ಬಿ. ರಾಮಸ್ವಾಮಿ.— ಇಂತಹ ಕಮಿಟಿಗಳಲ್ಲಿ ನಾನ್ ಆಫಿಸಿಯಲ್ಸ್‌ಗಳು ಇರುತ್ತಾರೆಂದು ಹೇಳಿದ್ದೀರಿ. ಅಧಿಕಾರಿಗಳು ಯಾಗು ಇರಬೇಕೆಂದು ಮಾಡಿದ್ದೀರಿ ಮತ್ತು ನಾನ್ ಆಫಿಷಿಯಲ್ ಯಾರನ್ನು ಹಾಕಬೇಕೆಂದು ಏಯಮಗಳನ್ನು ಹಾಕಿಕೊಂಡಿದ್ದೀರಿ ?

ಶ್ರೀ ಎಸ್. ಎಂ. ಯಾಹ್ಯಾ.— ಈ ಕಮಿಟಿಯಲ್ಲಿ ಆಫಿಷಿಯಲ್ಸ್ ಇರುತ್ತಾರೆ. ಡೆಪ್ಯೂಟಿ ಕಮಿಷನರವರು ಆಯಾ ಜಿಲ್ಲೆಯಲ್ಲಿ ಚೇರ್ಮನ್ನರಾಗಿರುತ್ತಾರೆ. ನಾನ್ ಆಫಿಷಿಯಲ್ಸ್ ಎಂದರೆ ಆಯಾ ಊರಿನ ಗಣ್ಯರು ಕೆಲವರು ಮತ್ತು ಕೆಲವು ಕಡೆ ಲೆಜಿಸ್ಲೇಟರುಗಳೂ ಇರುತ್ತಾರೆ.

* *Recognition of* H. *M. T. Employees Association.*

388. SRI M. S. KRISHNAN (Malleswaram).—Will the Minister for Exise and Labour be pleased to state :—

(*a*) since how many years the question of recognition of the Hindustan Machine Tools Employee's Association is pending;

(*b*) whether the Government constituted a one man Committee of Sri P. T. Kadkol, Retired Presiding Officer of the Labour Court, and Retired District and Sessions Judge to verify the records and submit its report to the Government as to which Trade Union has a majority of membership;